# ಬಾಲಿವುಡ್‌ನ ಇಬ್ಬರು ಯಶಸ್ವಿ ಮಿಲೇನಿಯಲ್ಸ್

**ಸಹಸ್ರಮಾನದ** ಯಶಸ್ವಿ ಹೆಣ್ಣುಮಕ್ಕಳ ವಿಷಯ ಬಂದಾಗ ಬಾಲಿವುಡ್‌ನ ಇಬ್ಬರು ನಟಿಯರು ನೆನಪಾಗದೇ ಇರಲು ಸಾಧ್ಯವೇ ಇಲ್ಲ. ಒಬ್ಬರು–ದೀಪಿಕಾ ಪಡುಕೋಣೆ. ಇನ್ನೊಬ್ಬರು–ಆಲಿಯಾ ಭಟ್.

‘ಶುಭಮಂಗಳ’ ಸಿನಿಮಾದಲ್ಲಿ ಆರತಿ ನಟಿಸಿದ ‘ಈ ಶತಮಾನದ ಮಾದರಿ ಹೆಣ್ಣು... ಸ್ವಾಭಿಮಾನದ ಸಾಹಸಿ ಹೆಣ್ಣು’ ಎಂಬ ಹಾಡನ್ನು ದೀಪಿಕಾ ಅವರಿಗೆ ಸಲೀಸಾಗಿ ಅನ್ವಯಿಸಬಹುದು. ಮೊದಲಿನಿಂದಲೂ ತಮಗೆ ತೋಚಿದ್ದನ್ನೇ ಮಾಡುತ್ತಾ ಬಂದ ನಟಿ ಅವರು. ಅಪ್ಪ–ಅಮ್ಮನ ಮೇಲೆ ಗೌರವ ಇಟ್ಟುಕೊಂಡೂ ನಿರ್ಧಾರ ತೆಗೆದುಕೊಳ್ಳುವ ವಿಷಯದಲ್ಲಿ ಅವರು ತಮ್ಮ ಮನದ ಮಾತಿಗೇ ಬದ್ಧರು. ವರ್ಷಗಟ್ಟಲೆ ಆಡಿದ್ದ ಬ್ಯಾಡ್ಮಿಂಟನ್ ಆಟವನ್ನು ದಿಢೀರನೆ ಬದಿಗೊತ್ತಿದ್ದು, ಮಾಡೆಲಿಂಗ್ ಕಡೆಗೆ ವಾಲಿದ್ದು, ಆಮೇಲೆ ನಟಿಯಾದದ್ದು, ಬರಬರುತ್ತಾ ಚೂಸಿ ಆದದ್ದು, ಈ ಪಯಣದ ನಡುವೆಯೇ ಖಿನ್ನತೆ ಅನುಭವಿಸಿದ್ದು, ಅದರಿಂದ ತಂತಾವೇ ಆಚೆ ಬಂದದ್ದು, ಮುರಿದ ಪ್ರೇಮದ ಕಹಿಯನ್ನು ಹಿಂದಿಕ್ಕಿ ಸಿಹಿ ಬದುಕನ್ನು ಕಟ್ಟಿಕೊಂಡದ್ದು, ಎಲ್ಲ ಸಂಘರ್ಷಗಳ ನಡುವೆಯೂ ಬಾಲಿವುಡ್‌ನ ನಂಬರ್ ಒನ್ ನಟಿ ಆದದ್ದು, ಈಗ ಇಷ್ಟಪಟ್ಟು ರಣವೀರ್ ಸಿಂಗ್ ಅವರನ್ನು ವರಿಸಿದ್ದು...ಹೀಗೆ ಒಂದೇ ಗುಕ್ಕಿನಲ್ಲಿ ದೀಪಿಕಾ ಬದುಕಿನ ಪುಟಗಳನ್ನು ಚಕಚಕನೆ ತೆಗೆದುಬಿಡಬಹುದು. 1986ರಲ್ಲಿ ಹುಟ್ಟಿದ ಅವರೀ ಮಿಲೇನಿಯಲ್‌ಗಳಲ್ಲಿ ಒಬ್ಬರು. ಮೊದಲಿನಿಂದಲೂ ತಮ್ಮ ಕಚೇರಿಯನ್ನು ತಾವೇ ಜಾಣ್ಮೆಯಿಂದ ನಿಭಾಯಿಸುತ್ತಾ ಬಂದಿರುವ ಅವರ ಆತ್ಮಬಲ ಹಾಗೂ ‘ಲಿವ್ ಲವ್ ಲಾಫ್’ ಸಂಸ್ಥೆಯ ಮೂಲಕ ತಣ್ಣಗೇ ಮಾಡುತ್ತಿರುವ ಕೆಲಸಗಳು ಅನುಕರಣೀಯ.

‘ನಾನು ಕನ್ಯತ್ವ ಕಳೆದುಕೊಂಡಾಗ ನನಗೆ ಹದಿಮೂರು’ ಎಂದು ಹೇಳಿ ಸಂಪ್ರದಾಯಸ್ಥರೆಲ್ಲ ಕಣ್ಣಗಲಿಸುವಂತೆ ಮಾಡಿದ್ದ ಆಲಿಯಾ ಭಟ್ ಕೂಡ ತಾನು ನಡೆದದ್ದೇ ದಾರಿ ಎಂದುಕೊಂಡ ಪ್ರತಿಭಾವಂತೆ. 2012ರಲ್ಲಿ ಕರಣ್ ಜೋಹರ್ ಕೊಟ್ಟ ಅವಕಾಶದಿಂದ ನಾಯಕಿಯಾದ ಅವರ ವೃತ್ತಿಬದುಕಿನ ಗ್ರಾಫ್ ಬರೀ ಆರು ವರ್ಷಗಳಲ್ಲೇ ಕಳೆಗಟ್ಟಿತು. ‘ಹೈವೇ’, ‘ಉಡ್ತಾ ಪಂಜಾಬ್’, ‘ರಾಜಿ’, ಈಗ ‘ಗಲ್ಲಿ ಬಾಯ್’... ಈ ಸಿನಿಮಾಗಳಲ್ಲಿನ ಅವರ ಪಾತ್ರತೂಕವೇ ನಿರ್ದೇಶಕರ ಪ್ರಯೋಗಶೀಲ ಕಣ್ಣುಗಳ ನಾಯಕಿ ಅವರೆನ್ನುವುದಕ್ಕೆ ಸಾಕ್ಷಿ. ತಂದೆ ಮಹೇಶ್ ಭಟ್ ಹಿಂದಿ ಚಿತ್ರರಂಗದಲ್ಲಿ ನಿರ್ದೇಶಕ, ನಿರ್ಮಾಪಕರಾಗಿ ಹೆಸರು ಮಾಡಿದ್ದರೂ ಆಲಿಯಾ ನೋಡನೋಡುತ್ತಲೇ ಅಪ್ಪನನ್ನೂ ಮೀರಿಸುವ ಹಾದಿಯಲ್ಲಿ ಸಾಗುತ್ತಿರುವುದು ವಿಶೇಷ. ಅವರ ಓರಗೆಯವರ ಪಾಲಿಗೆ ಅವರು ಮಹೇಶ್ ಭಟ್ ಮಗಳಷ್ಟೇ ಅಲ್ಲ; ಆಲಿಯಾ ತಂದೆ ಮಹೇಶ್ ಎಂದು ಹೇಳುವಷ್ಟರ ಮಟ್ಟಿಗೆ ಅವರು ತಮ್ಮತನದ ಛಾಪು ಮೂಡಿಸಿದ್ದಾರೆ.

ಬಿಡುಬೀಸಾಗಿ ಮಾತನಾಡುವ, ಸಾಮಾಜಿಕ ಜಾಲತಾಣಗಳಲ್ಲಿ ದಡ್ಡಿ ಎನಿಸಿಕೊಂಡೇ ಕೆಲವು ಮೀಮ್‌ಗಳಿಗೆ ವಸ್ತುವಾದ ಆಲಿಯಾ ‘ನೆಗೆಟಿವ್ ಪಬ್ಲಿಸಿಟಿ’ಯನ್ನು ಮೀರಿಯೂ ಒಬ್ಬ ನಟಿಯಾದ ಪ್ರಕ್ರಿಯೆ ಕುತೂಹಲಕಾರಿ. ಮಿಲೇನಿಯಲ್‌ಗಳ ಮನೋನಂದನದ ಚೆಲ್ಲಾಪಿಲ್ಲಿ ಸಂಗತಿಗಳ ನಡುವೆಯೂ ಹಳಹಳಿಕೆಯನ್ನೂ ಮೀರಿ ಬೆಳೆಯುವ ಇಂತಹ ಅಸಂಖ್ಯ ಉದಾಹರಣೆಗಳು ಸಿಗುತ್ತವೆ.



